# ಮುಖ್ಯ ಚುನಾವಣಾಧಿಕಾರಿಯವರ ಕಛೇರಿ, ಕರ್ನಾಟಕ
## ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು -560 001.

ಸಂಖ್ಯೆ: ಸಿಆಸುಇ 02 ಎಂಸಿಸಿ (ಅಮುಚುಅ-1) 2024 ದಿನಾಂಕ:17.03.2024

**"ಚುನಾವಣಾ ತುರ್ತು"**

**ಇವರಿಗೆ**

ರಾಜ್ಯದ ಎಲ್ಲಾ ನೊಂದಾಯಿತ/
ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು,
ಕರ್ನಾಟಕ.

ಮಾನ್ಯರೆ,

ವಿಷಯ: ತಾರಾ ಪ್ರಚಾರಕರ (ಸ್ಟಾರ್ ಕ್ಯಾಂಪೆನರ್) ಪಟ್ಟಿಯನ್ನು ಒದಗಿಸುವ ಕುರಿತು

ಉಲ್ಲೇಖ: 1. ಭಾರತ ಚುನಾವಣಾ ಆಯೋಗದ ಪತ್ರ ಸಂಖ್ಯೆ: 76/Instrctuctions/2012/EEPS/Vol.I,ದಿನಾಂಕ:22.01.2014
2. ಜನ ಪ್ರತಿನಿಧ್ಯ ಕಾಯ್ದೆ 1951 ರ ಕಲಂ 77(1).
3. ಭಾರತ ಚುನಾವಣಾ ಆಯೋಗದ ಚುನಾವಣಾ ವೆಚ್ಚ ಕೈಪಿಡಿ ಭಾಗ ಡಿ ರಲ್ಲಿಯ ಕ್ರಮ ಸಂಖ್ಯೆ:6(1) ನಿರ್ದೇಶನಗಳು.

-------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಭಾರತ ಚುನಾವಣಾ ಆಯೋಗದ ಪತ್ರದಲ್ಲಿ (ಪ್ರತಿ ಲಗತ್ತಿಸಿದೆ) ಕಂಡಿಕೆ(ಬಿ) ರಲ್ಲಿ ಕೆಳಕಾಣಿಸಿದಂತೆ ಉಲ್ಲೇಖಿಸಲಾಗಿರುತ್ತದೆ:-

"(b) The name of leaders of the political party(star campaigners) as defined in Explanation 2 of section 77(1) of the R.P. Act, 1951 are to be communicated to the Election Commission of India and the Chief Electoral Officers of the State by the political party, within a period of seven days from the date of notification for such election and such leaders are entitled to the benefits provided under section 77 of the R.P Act, 1951, from the date on which the list including his name is received by the Election Commission of India and by the Chief Electoral Officer of the State concerned."

ಜನ ಪ್ರಾತಿನಿಧ್ಯ ಕಾಯ್ದೆ, 1951ರ ಕಲಂ 77ರ ಅಂಶಗಳನ್ನು ಅವಗಾಹನೆಗಾಗಿ ಈ ಪತ್ರದೊಂದಿಗೆ ಲಗತ್ತಿಸಿದೆ.

ಭಾರತ ಚುನಾವಣಾ ಆಯೋಗದ ಚುನಾವಣಾ ವೆಚ್ಚ ಕೈಪಿಡಿ ಭಾಗ ಡಿ ರಲ್ಲಿಯ ಕ್ರಮ ಸಂಖ್ಯೆ: 6(1) ನಿರ್ದೇಶನಗಳ ಅನ್ವಯ ನೊಂದಾಯಿತ ಹಾಗೂ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಒಟ್ಟು 40 ತಾರಾ ಪ್ರಚಾರಕ (ಸ್ಟಾರ್ ಕ್ಯಾಂಪೆನರ್) ಪರವಾನಿಗೆ ನೀಡಲು ಹಾಗೂ ನೊಂದಾಯಿತ ಹಾಗೂ ಮಾನ್ಯತೆ ಪಡೆಯದ ಪಕ್ಷಗಳಿಗೆ ಒಟ್ಟು 20 ತಾರಾ ಪ್ರಚಾರಕ (ಸ್ಟಾರ್ ಕ್ಯಾಂಪೆನರ್) ಪರವಾನಿಗೆ ನೀಡಲು ಅವಕಾಶವಿರುತ್ತದೆ.

..2ಕ್ಕೆ

ಭಾರತ ಚುನಾವಣಾ ಆಯೋಗದ ಪತ್ರಿಕಾ ಪ್ರಕಟಣೆಯ ದಿನಾಂಕ: 16.03.2024 ರಂತೆ ಸಾರ್ವತ್ರಿಕ ಲೋಕ ಸಭಾ ಚುನಾವಣೆ-2024 ರ ವೇಳಾಪಟ್ಟಿ ಅನ್ವಯ ಅಧಿಸೂಚನೆಯನ್ನು ಹೊರಡಿಸಲು ದಿನಾಂಕ:28.03.2024 ಮತ್ತು ದಿನಾಂಕ:12.04.2024 ವನ್ನು ನಿಗಧಿಪಡಿಸಲಾಗಿರುತ್ತದೆ.

ಮೇಲಿನ ನಿರ್ದೇಶನಗಳ ಮೇರೆಗೆ ತಮ್ಮ ಪಕ್ಷದ ತಾರಾ ಪ್ರಚಾರಕರ (ಸ್ಟಾರ್ ಕ್ಯಾಂಪೇನರ್) ಪಟ್ಟಿಯನ್ನು ಸದರಿ ಅಧಿಸೂಚನೆ ಹೊರಡಿಸಿದ 7 ದಿವಸಗಳ ಅವಧಿಯೊಳಗಾಗಿ ಭಾರತ ಚುನಾವಣಾ ಆಯೋಗಕ್ಕೆ ಮತ್ತು ಮುಖ್ಯ ಚುನಾವಣಾಧಿಕಾರಿಗಳು ಕಛೇರಿಗೆ ಕಳುಹಿಸಲು ಕೋರಿದೆ.

ಅಧಿಸೂಚನೆ ಹೊರಡಿಸಿದ 7 ದಿವಸಗಳ ಅವಧಿಯ ನಂತರ ಸ್ವೀಕೃತವಾಗುವ ಪಟ್ಟಿಯನ್ನು ಪರವಾನಿಗೆ ನೀಡಲು ಪರಿಗಣಿಸಲು ಬರುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ.

ತಮ್ಮ ನಂಬುಗೆಯ,

**(ಆರ್. ವೆಂಕಟೇಶ್ ಕುಮಾರ್)**
ಅಪರ ಮುಖ್ಯ ಚುನಾವಣಾಧಿಕಾರಿ-1,
ಸಿಆಸುಇ (ಚುನಾವಣೆಗಳು).